**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ.**1649/2022**

| | | |
|---|---|---|
| ಸಾಕ್ಷಿದಾರರ ಹೆಸರು | - ನಟರಾಜ್ | PW:11 |
| ತಂದೆಯ ಹೆಸರು | - ಲೇಟ್ ಯು ವಿರೂಪಾಕ್ಷಪ್ಪ | CW:12 |
| ವಯಸ್ಸು | - 42 ವರ್ಷ | ಪ್ರಮಾಣ ವಚನ ಬೋಧಿಸಿದ |
| ಉದ್ಯೋಗ | - ಮುಖ್ಯ ಪೇದೆ. ಮಹಿಳಾ ಪೊಲೀಸ್ ಠಾಣೆ, ಚಿತ್ರದುರ್ಗ. | ದಿ: 30/01/2026 |
| ವಾಸ | - ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ನಾನು 15.07.2019 ರಿಂದ ಇಲ್ಲಿಯವರೆಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಾರ ಇದ್ದೇನೆ. ದಿಃ15.04.2022 ರಂದ ನಾನು ಠಾಣಾ ಪ್ರಬಾರದಲ್ಲಿ ಇದ್ದಾಗ ಚಾಸಾ.1 ರವರು ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ ವೈರ್ ಲೆಸ್ ಮುಖಾಂತರ ಠಾಣೆಗೆ ಬಂದಿದ್ದರಿಂದ ಬೆಳಗ್ಗೆ 10.30 ಗೆ ಆಸ್ಪತ್ರೆಗೆ ಹಾಜರಾಗಿ ಮೆಮೊ ವನ್ನು ಸ್ವೀಕರಿಸಿಕೊಂಡು ನಂತರ ಮದ್ಯಾಹ್ನ 12.00 ಗಂಟೆ ಸುಮಾರಿಗೆ ಚಾಸಾ.1 ರವರಿಗೆ ಹೇಳಿಕೆ ಪಡೆದುಕೊಂಡು ಠಾಣೆಗೆ ಹಾಜರಾಗಿ ಮೊಕದ್ದಮೆ ಸಂಖ್ಯೆ 55/2022 ರಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾದಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ.1 ಅಂತ ಗುರುತಿಸಲಾಗಿರುತ್ತದೆ . ಸಾಕ್ಷಿಯ ನಿಪಿ.1(ಬಿ) ಅಂತ ಗುರುತಿಸಲಾಯಿತು. ನಂತರ ದಿಃ17.04.2022 ರಂದು ಸಂಜೆ 4.30 ಗಂಟೆ ಕೃತ್ಯ ನಡೆದ ಸ್ಥಳದ ಪಂಚನಾಮೆ ಕೈಗೊಳ್ಳಲು ನಾನು ಮತ್ತು ಠಾಣೆಯ ಚಾಸಾ.11

ರವರನ್ನು ಕರೆದುಕೊಂಡು 4.30 ಗೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ 4.30 ರಿಂದ 5.30 ರವರಿಗೆ ಚಾಸಾ.2 ಮತ್ತು 3 ರವರಿಗೆ ಸ್ದಳದಲ್ಲಿ ನೋಟೀಸ್ ಜಾರಿ ಮಾಡಿ ಚಾಸಾ.1 ರವರ ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ . ಸದರಿ ಪಂಚನಾಮೆಯಲ್ಲಿರುವ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ನಿಪಿ.4 ಕ್ಕೂ ಕೂಡ ನಾನು ಸಹಿ ಮಾಡಿರುತ್ತೇನೆ ಸಾಕ್ಷಿ ತನ್ನ ಸಹಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿ ನಿಪಿ.4(ಸಿ) ಅಂತ ಗುರುತಿಲಸಾಯಿತು. ಪಂಚನಾಮೆಯ ಕಾಲದಲ್ಲಿ ತೆಗೆದ ಬಾವಚಿತ್ರಗಳನ್ನು ಈಗಾಗಲೇ ನಿಪಿ.3 ಅಂತ ಗುರುತಿಸಲಾಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ನಂತರ ದಿಃ12.05.2022 ರಂದು ಆರೋಪಿತರು ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಯಿಂದ ಹಾಜರಾಗಿದ್ದರಿಂದ ಅವರನ್ನು ನಾನು ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನನ್ನು ಪಡೆದು ಅವರಿಗೆ ಬಿಡುಗಡೆ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮೆಮೊ ನೋಡಿ ಗುರುತಿಸಿದ್ದು ಸದರಿ ಮೆಮೊ ವನ್ನು ನಿಪಿ.10 ಎಂದು ಗುರುತಿಲಸಾಯಿತು. ಸದರಿ ದಾಖಲೆಯಲ್ಲಿನ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಸದರಿ ವರ್ತಮಾನ ವರದಿಯನ್ನು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಪ್ರಕರಣದಲ್ಲಿನ ಮುಂದಿನ ತನಿಖೆಗಾಗಿ ಚಾಸಾ.13 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿಯ ಪರ ಶ್ರೀ ಬಿ ಕೆ ಎಂ ವಕೀಲರಿಂದಃ**

ಠಾಣೆಯಿಂದ ಮೆಮೊ ಬಂದರೆ ಅದನ್ನು ಠಾಣೆ ಡೈರಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಹೌದು. ಆ ಡೈರಿಯಲ್ಲಿ ಮೆಮೊ ಬಂದ ಸಮಯ ಮತ್ತು ಸೀರಿಯಲ್ ನಂಬರ್ ನಮೂದು ಮಾಡುತ್ತಾರೆ ಎಂದರೆ ಹೌದು. ಮೆಮೊದಲ್ಲಿ

ಸೀರಿಯಲ್ ನಂಬರ್ ಬರೆಯಲ್ಲ ಕೇವಲ ದಿನಾಂಕ ಮತ್ತು ಸಮಯ ಮಾತ್ರ ಬರೆಯುತ್ತೇವೆ ಆದರೆ ಡೈರಿಯಲ್ಲಿ ಮಾತ್ರ ಸೀರಿಯಲ್ ನಂಬರ್ ಬರೆಯುತ್ತೇವೆ ಎಂದು ಹೇಳುತ್ತಾರೆ. ದಿ:15.04.2022 ರಂದು ನಾನು ಮೆಮೊ ಸ್ವೀರಿಸಿರುತ್ತೇನೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆಸ್ಪತ್ರೆಗೆ ಬೇಟಿ ಮಾಡಿದ ಸಮಯದಲ್ಲಿ ಯಾರ್ಯಾರು ಇದ್ದರು ಎಂದರೆ ಹೊರರೋಗಿ ವಿಬಾಗದಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡು ಚಾಸಾ.1 ರವರು ಜೊತೆಯಲ್ಲಿ ಇರುತ್ತಾರೆ. ದೂರು ಬರೆದುಕೊಂಡೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾನು ದೂರು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇರೀತಿ ಯಾವುದೇ ಒಬ್ಬ ಪಂಚರನ್ನು ಕರೆಯಲು ಠಾಣೆಯಲ್ಲಿ ಡೈರಿಯಲ್ಲಿ ಬರೆಯಬೇಕು ಎಂದರೆ ಹಾಗೇನಿಲ್ಲ. ಚಾಸಾ.2 ಮತ್ತು 3 ರವರು ಸ್ಥಳತನಿಖೆ ಮಾಡಲು ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ.2 ಮತ್ತು 3 ರವರ ಸಮಕ್ಷಮದಲ್ಲಿ ನಿಪಿ.2 ಪ್ರಕಾರ ಸ್ಥಳ ಪಂಚನಾಮೆ ಮಾಡಿದೆ ಎಂದು ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಸ್ಥಳ ತನಿಖೆ ಮಾಡುವುದಕ್ಕೆ ಅಲ್ಲೇ ಅಕ್ಕಪಕ್ಕದವರಿಗೆ ನೋಟೀಸ್ ಜಾರಿ ಮಾಡಲು ಅಬ್ಯಂತರ ಇರಲಿಲ್ಲ ಎಂದರೆ ಹೌದು ಆದರೆ ಅಷ್ಟರಲ್ಲಿ ಪಂಚರು ಸ್ಥಳಕ್ಕೆ ಬಂದರು. ಪಂಚರು ಎಲ್ಲಿಗೆ ಬಂದರು ಎಂದರೆ ಜೋಗಿಮಟ್ಟಿ ರೋಡ್ 4 ನೇ ಕ್ರಾಸ್ ಹತ್ತಿರ ಬಂದರು. ಅಲ್ಲಿ ನೋಟೀಸ್ ಜಾರಿ ಮಾಡಿಲ್ಲ ಆದರೆ ಅವರಿಗೆ ಕೇಳಿಕೊಂಡಿರುತ್ತೇವೆ ಅವರು ಒಪ್ಪಿರುತ್ತಾರೆ. ಯಾವುದೇ ಸ್ಥಳ ತನಿಖೆ ಮಾಡಬೇಕಾದರೆ ಮೊದಲು ಪಂಚರಿಗೆ ನೋಟೀಸ್ ಜಾರಿ ಮಾಡಿ ನಂತರ ಹೋಗಬೇಕು ಎಂದರೆ ಸರಿಯಲ್ಲ. ನಿಪಿ.2 ನ್ನು ನಾನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಕಾಲದಲ್ಲಿ ನಿಪಿ.3 ರಂತೆ ಪೊಟೊ ತೆಗೆದಿರುತ್ತೇವೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಮ್ಮ ಮೇಲಾದಿಕಾರಿಗಳ ಮಾತು ಕೇಳಿ ದೂರನ್ನು ನಾವೇ ಸೃಷ್ಟಿ ಮಾಡಿಕೊಂಡು ನಾವೇ ಎಪ್ ಐ ಆರ್ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದೇ ಇದ್ದರೂ ಸಹ ಚಾಸಾ.1 ಮತ್ತು 4 ರವರ ಮಾತು ಕೇಳಿ ನಾನು ಸುಳ್ಳು ಎಪ್ ಐ ಆರ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ಮತ್ತು 4

**PW_**11

ರವರಿಗೆ ಯಾವುದೇ ಗಲಾಟೆ ಮಾಡಿಲ್ಲ ಹೊಡೆದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯು ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**